ನನ್ನ ಕುಟುಂಬ ಕೃಷಿ ಕುಟುಂಬ ಅಲ್ಲ. ಆದರೆ ಹತ್ತು-ಹನ್ನೆರಡನೇ ವಯಸ್ಸಿನಿಂದಲೇ ನಾನು ಬೆಳೆದದ್ದು ಕೃಷಿ ಸಮಾಜದಲ್ಲಿ. ಕೃಷಿಕರ ನಡುವೆ ಬೆಳೆದೆ. ಕೃಷಿಕರ ಭಾಷೆಯ ನಡುವೆ ಬೆಳೆದೆ. ಕೃಷಿ ಮಹಿಳೆಯರ ಬೈಗುಳದ ಮಾತುಗಳನ್ನು ಕೇಳಿಸಿಕೊಂಡು ಬೆಳೆದೆ. ಅವರ ಕಷ್ಟ ಸುಖ ಗೊತ್ತಾಯಿತು. ನಾನು ಮನೆಯಲ್ಲಿ ಮಲಗಿದ್ದಕ್ಕಿಂತ ತೋಟಗಳಿಗೆ, ಹೊಲಗಳಿಗೆ, ಕಣಗಳಿಗೆ ಅವರ ಜೊತೆ ಕಾವಲಿಗೆ ಹೋಗ್ತಿದ್ದೆ. ಉಣ್ಣುತ್ತಿದ್ದುದು ರೈತ ಮನೆಗಳಲ್ಲೇನೆ. ಯಾಕೆ ಅಂದರೆ, ನಮ್ಮ ಮನೆಯಲ್ಲಿ ನಾನು ಚಿಕ್ಕ ವಯಸ್ಸಿನಿಂದಲೇ ಬಹಿಷ್ಕೃತ. ಆಮೇಲೆ ನಾನು ಸಣ್ಣ ಸಣ್ಣ ಹಳ್ಳಿಗಳಲ್ಲಿ ಮೇಷ್ಟ್ರಾಗಿ ಕೆಲಸ ಮಾಡಿದ್ದು. ಅಲ್ಲಿ ನಾನು ಬದುಕಿದ್ದು ರೈತರ ಒಡನಾಟದಲ್ಲಿ. ನನ್ನಜ್ಜಿ ವೆಂಕಮ್ಮ ದನ-ಕರು ಸಾಕೋಳು. ಅದೂ ಕೃಷಿಯ ಒಂದು ಭಾಗವೆ. ಆಮೇಲೆ ನಾನು ಮಾರುಕಟ್ಟೆಯಲ್ಲಿ ಕೊಳ್ಳುವುದಕ್ಕೂ ರೈತನಿಗೆ ಹೊಲದಲ್ಲಿ ಸಿಗೋ ಬೆಲೆಗೂ ಬಹಳ ಅಂತರ ಇರೋದು. ನಾವು ಸಮಾಜ ವಿಜ್ಞಾನ ಪಾಠದಲ್ಲಿ ಓದಿದ್ದಕ್ಕೂ ಇಲ್ಲಿಗೂ ಸಂಬಂಧ ಇರ್‍ತಿರಲಿಲ್ಲ. ಯಾವುದೋ ದೇಶದ ಬೆಳೆಗಳ ಬಗ್ಗೆ ಹೇಳಿಕೊಡೋರು. ಆದರೆ ನಮ್ಮಪ್ಪ ಬೆಳೀತಿದ್ದ ತೊಗರಿ, ಅವರೆ ಬಗ್ಗೆ ನನಗೆ ಜ್ಞಾನವಿರ್‍ತಿರಲಿಲ್ಲ. ಇವತ್ತಿಗೂನು ದೂರದ ಸಮುದ್ರದ ಬಗ್ಗೆ ಮಕ್ಕಳಿಗೆ ಪಾಠ ಹೇಳುತ್ತೇವೆ. ಆದರೆ ಶಾಲೆ ಪಕ್ಕದಲ್ಲಿರೋ ಕೆರೆಯ ಹೆಸರೇನು, ಅದರ ವಿಸ್ತೀರ್ಣ ಏನು, ಅದಕ್ಕೆ ನೀರು ಎಲ್ಲಿಂದ ಬರುತ್ತೆ ಅನ್ನೋದು ಮಕ್ಕಳಿಗೆ ಗೊತ್ತಿರೋಲ್ಲ. ಇಷ್ಟು ಮಾತ್ರದ ಪರಿಸರ ಪಾಠ ಮಾಡ್ತಾ ಇದೀವಿ. ಇದೆಲ್ಲಕ್ಕಿಂತ ಮುಖ್ಯವಾಗಿ ನನ್ನ ಮೈಯ ಕಣಕಣವೂ ರೈತನ ಶ್ರಮದಿಂದ ರೂಪುಗೊಂಡಿರುವಂಥದ್ದು. ಋಣ ಇದೆ ನನ್ನ ಮೇಲೆ. 'ಮಂದಿ ಮಂದಿ ಎಂದು ಮಂದಿ ನಂಬಲಿ ಹೋದ ಮಂದಿ ಬಿಟ್ಟಾರ ನಡುನೀರ ಮಲ್ಲಯ್ಯ ತಂದಿ ನನ ಕೈಯ ಬಿಡಬೇಡ' ಅಂತ ಹೇಳ್ತಾಳೆ, ಜನಪದ ಹೆಣ್ಣು. 'ಮಂದಿ' ಅಂದ್ರೆ ಯಾರು? ಸರ್ಕಾರ, ಆರ್ಥಿಕ ಸಂಸ್ಥೆಗಳು ಇಂಥವು. ಇವೆಲ್ಲವೂ ರೈತನನ್ನು ನಡು ನೀರಲ್ಲಿ ಬಿಟ್ಟಾಯಿತು. ಹೀಗಾದಾಗ 'ತಂದಿ ನನ ಕೈಯ ಬಿಡಬೇಡ' ಅಂತ ಯಾರನ್ನ ಕೇಳಿಕೋಬೇಕು? ಮಳೆರಾಯನನ್ನು ಕೇಳಿಕೋಬೇಕು; ಭೂಮೀನ ಕೇಳಿಕೋಬೇಕು. ಬೆಳಗಾಗ ನಾನೆದ್ದು ಬರತೇನ - ಹಾಗಾಗಿ ಇದನ್ನ ನಂಬಿಕೊಂಡಂತ ರೈತನ ಜೊತೆ ನಾನು ನಿಲ್ಲಬೇಕಲ್ಲ? ನನ್ನ ಋಣ ಸ್ವಲ್ಪ ತೀರಬೇಕಲ್ಲ? ಅವರ ಭಾಷೆ, ಬದುಕು ನನ್ನ ಸಾಹಿತ್ಯ ರಚನೆಯ ಪರಿಕರಗಳಾಗಿರುವಾಗ ನನಗೆ ಇನ್ನೂ ಹೆಚ್ಚಿನ ಜವಾಬ್ದಾರಿ ಇರುತ್ತದೆಯಲ್ಲವೆ? ನಾನು ಆ ಕಡೆಗೂ ಸ್ವಲ್ಪ ಹೊರಳಿದೆ. ಯಾರು ಎಷ್ಟೇ ಪರಿಪೂರ್ಣ ಅಂದರೂ ಪುರುಷೋತ್ತಮನೆಂಬ ರಾಮನೂ ಸಹ ರೈತ ಋಣಿಯೆ. ಇನ್ನು ನಾನ್ಯಾವ ಲೆಕ್ಕ. ಒಂದಂತೂ ನಿಜ. ದೊಡ್ಡ ದೊಡ್ಡ ನಗರಗಳ ಮಂದಿ ರೈತ ಸಮಾಜ, ಕೃಷಿಯ ಬಗ್ಗೆ ಸಿನಿಕಲ್ ಆಗಿ ಮಾತನಾಡುವುದು, ಆಲೋಚಿಸುವುದನ್ನು ಬಿಟ್ಟು ರೈತ ಮನಸ್ಸಿನಿಂದ ಸಮಸ್ಯೆಗಳನ್ನು ತೀರಿಸುವ ನಿಟ್ಟಿನಲ್ಲಿ ಕೆಲಸ ಮಾಡಿ ಅವನ ಋಣ ತೀರಿಸಬೇಕು ಅಂತ ನನ್ನ ಮನವಿ.

◆ **ಸಾಹಿತ್ಯ ರಚನೆ, ಅನುವಾದ, ಸಮಾಜಮುಖಿ ಕೆಲಸಗಳು, ನಿಘಂಟು ರಚನೆ, ಸಂಪಾದನೆ, ಅಂಕಣ ಬರಹ, ಕಮ್ಮಟಗಳು ಇನ್ನೂ ಬಹಳಷ್ಟು ಕೆಲಸಗಳು ಒಂಟಿಕಾಲಿನ ಸಹಾಯದಿಂದಲೇ ನಡೆಯುತ್ತಿವೆ. ಇದು ಒಂಟೆತ್ತಿನ ಕೆಲಸವೆಂದು ನಿಮಗೆ ಎಂದಾದರು ಅನಿಸಿದ್ದುಂಟೆ? ಮತ್ತು ನಿಮ್ಮ ಒಂಟಿಕಾಲಿನ ಕಥೆಯನ್ನು ಸ್ವಲ್ಪ ಹೇಳುವಿರ?**

ಈ ಒಂಟಿಕಾಲಿನ ಕಥೆಯನ್ನ ಒಂಟಿಕಾಲೇ ಹೇಳುತ್ತೆ. ಒಂದು, ಆತ್ಮಹತ್ಯೆಯು ಅಪರಾಧ ಅಂತಾರೆ. ಅಪರಾಧ ಅಂದಮೇಲೆ ಶಿಕ್ಷೆ ಇದ್ದೇ ಇರುತ್ತೆ. ನಾನು ಆತ್ಮಹತ್ಯೆಯ ಅಪರಾಧ ಮಾಡಿದೆ. ಒಂಟಿ ಕಾಲೇ ಅದಕ್ಕೆ ಶಿಕ್ಷೆ. ಆತ್ಮಹತ್ಯೆ ಅನ್ನೋದು ಅಪರಾಧ ಆದರೂ ಅದು ಒಂದು ದೊಡ್ಡ ಸಾಹಸ. ಯಶಸ್ವಿ ಆದರೆ ಸಫಲನಾದ ಅಂತ. ವಿಫಲನಾದರೆ ಅಂಗವಿಕಲನಾದ ಅಂತ. ಯಾವುದೋ ಒಂದು ಊನ ಆಗೇ ಆಗುತ್ತೆ. ನಾನು ಹಾಗೆ ಮಾಡಿಕೊಂಡ ಊನ ಇದು. ಬದುಕೇ ಇಲ್ಲ ಅನ್ನುವ ನಿರಾಸೆಯ ನೆಲೆಯಲ್ಲಿ ಮಾಡಿದಂತ ಕೆಲಸ ಅದು. ನನಗೆ ಈಗಲೂ ಅನಿಸುತ್ತೆ, ಈ ಆತ್ಮಹತ್ಯೆ ಅನ್ನೋದಿದೆಯಲ್ಲ, ಒಂದು ಸಲ ಅದರ ಹತ್ತಿರಕ್ಕೆ ಹೋಗಿ ಬಂದುಬಿಟ್ಟರೆ ಅಲ್ಲಿಗೆ ಅದು ಮುಗಿಯಲ್ಲ. ಯಾವುದಾದರೂ ಒಂದಲ್ಲಾ ಒಂದು ದುರ್ಬಲ ಕ್ಷಣಗಳಲ್ಲಿ ಮತ್ತೆ ಅದೇ ನಮ್ಮನ್ನ ಪ್ರೇರೇಪಿಸುತ್ತೆ. ಅದಕ್ಕೆ ಶರಣಾಗತನಾದರೆ ನಾನು ಇನ್ನೊಂದು ಸಲ ಪ್ರಯತ್ನ ಮಾಡ್ತೇನೆ.